ದಿ: 03-12-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

:ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ. ಎಮ್ ಎಸ್ ಹೆಚ್ ವಕೀಲರಿಂದ

ನಾನು ಈ ದಾವೆಯಲ್ಲಿ ವಾದಿಯರ ಒಟ್ಟು ಮುಖ್ತ್ಯಾರದಾರನಿದ್ದು ವಾದ ಪತ್ರವನ್ನು ತಿದ್ದುಪಡಿ ಮಾಡಿದ ನಂತರ ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ.

ಮುಂದುವರೆದ ಪಾಟೀ ಸವಾಲು 1, 4 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ.ಆರ್ ಪಿ ಎ ವಕೀಲರಿಂದ

ದಿನಾಂಕ 31-10-1978 ರಂದು ನನ್ನ ಅಜ್ಜ ಮರಣ ಹೊಂದಿದ ನಂತರ ನನ್ನ ತಂದೆ ಮತ್ತು ನನ್ನ ಅಜ್ಜನ ನಾಲ್ಕು ಜನ ಗಂಡು ಮಕ್ಕಳ ಹೆಸರಿನಲ್ಲಿ ವಾರಸಾ ನಾತೆಯಿಂದ ಡ ನಂ.1810 ಮಂಜೂರಾಯಿತು ಎಂದರೆ ಸರಿಯಲ್ಲ. ನಿ ಪಿ 3 ರ ಪಹಣಿಯಲ್ಲಿ ನಿಮ್ಮ ತಂದೆ ಮತ್ತು ಅವರ ಸಹೋದರರ ಹೆಸರು ಯಾವ ನಾತೆಯಿಂದ ದಾಖಲಾಯಿತು ಎಂದರೆ ನನಗೆ ಅಷ್ಟೊಂದು ಮಾಹಿತಿ ಇಲ್ಲ. ನಿ ಪಿ 3 ರಲ್ಲಿರುವ ಆಸ್ತಿ ಮೂಲತಃ ನನ್ನ ಅಜ್ಜನಿಗೆ ಸೇರಿದ್ದು. ಈಗ ನೋಡುತ್ತಿರುವ ಡ ನಂಬರ್ 1810 ರ ಆಧಾರದ ಮೇಲೆ ನನ್ನ ಅಜ್ಜನ ಮರಣಾನಂತರ ನನ್ನ ತಂದೆ ಮತ್ತು ಅವರ ಸಹೋದರರ ಹೆಸರು ನಿ ಪಿ 3 ರ ಪಹಣಿಯಲ್ಲಿ ದಾಖಲಾಯಿತು ಎಂದರೆ ಇರಬಹುದು. ಸದರಿ ಡ ನಂ. 1810 ನ್ನು ನಿ ಡಿ 18 ಎಂದು ಗುರುತಿಸಲಾಯಿತು. ನಮ್ಮ ಘರಾಣೆಯಲ್ಲಿ ಈಗಾಗಲೇ ಹಿಸ್ಸೆಯಾಗಿರುವ ಕಾರಣ ನಾನು ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾದ ಎಲ್ಲ ಆಸ್ತಿಗಳಲ್ಲಿ ನಮ್ಮ ಹಿಸ್ಸೆ ಠರಾಯಿಸಿಕೊಡುವಂತೆ ಕೇಳಿರುವುದು ಸುಳ್ಳಾಗಿದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು 2 ಮತ್ತು 3 ನೇ ಪ್ರತಿವಾದಿಯರ ಪರ

(2 ಮತ್ತು 3 ನೇ ಪ್ರತಿವಾದಿಯರನ್ನು ಹಾಗೂ ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರು, ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

: ಮರುವಿಚಾರಣೆ ಇಲ್ಲ :

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
- ಸಹಿ-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್